ಚಿಕ್ಕೋಡಿ ತಾಲ್ಲೂಕಿನ ಆಶ್ರಯ ಸಮಿತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1132(1371)

ಸದಸ್ಯರ ಹೆಸರು: ಶ್ರೀ ಕಟ್ಟೀಮನಿ ಮನೋಹರ ಶಿವಪುತ್ರ(ಚಿಕ್ಕೋಡಿ)

ಉತ್ತರಿಸುವ ಸಚಿವರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)

ಪ್ರಶ್ನೆ

ಅ. ಚಿಕ್ಕೋಡಿ ತಾಲ್ಲೂಕಿನ ಗ್ರಾಮಾಂತರ ಆಶ್ರಯ ಸಮಿತಿಯನ್ನು 2000ರಿಂದ 2002ರ ಇಪ್ಪಿಯವರೆಗೆ ಎಷ್ಟು ಬಾರಿ ರಚಿಸಲಾಯಿತು?

ಆ. ಈ ರೀತಿಯ ರಚನೆಗೆ ಕಾರಣವೇನು?

ಉತ್ತರ

ಅ. ಚಿಕ್ಕೋಡಿ ಕ್ಷೇತ್ರದ ಆಶ್ರಯ ಸಮಿತಿಯನ್ನು 4 ಬಾರಿ ರಚಿಸಿದೆ.

ಆ. ಆಶ್ರಯ ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ತ್ವರಿತಗತಿಯಲ್ಲಿ ಜಾರಿಗೊಳಿಸುವುದಕ್ಕಾಗಿ ಆಶ್ರಯ ಸಮಿತಿಯನ್ನು ರಚಿಸಲಾಗಿದೆ.

ಸವದತ್ತಿ ತಾಲ್ಲೂಕಿನ ಶ್ರೀಕ್ಷೇತ್ರ ಸೊಗಲದಲ್ಲಿ ಬ್ರೀಜ್ ಕಂ ಬಾಂದಾರ ಕೆಲಸ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1133(1092)

ಸದಸ್ಯರ ಹೆಸರು: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು: ಶ್ರೀ ಎಂ.ಪಿ.ಫೋರ್ಪಡೆ(ಗ್ರಾ.ಪ.ರಾಜ್ ಸಚಿವರು)

ಪ್ರಶ್ನೆ

ಅ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಶ್ರೀಕ್ಷೇತ್ರ ಸೊಗಲದಲ್ಲಿ ಕರ್ನಾಟಕ ಭೂಸೇನಾ ನಿಗಮದವರು ಕಟ್ಟುತ್ತಿರುವ ಬ್ರೀಜ್ ಕಂ ಬಾಂದಾರ ಕೆಲಸ ಅರ್ಧಕ್ಕೆ ಸ್ಥಗಿತಗೊಂಡಿರುವ ಸಂಗತಿ ನಿಜವೇ?

ಆ. ಈ ಕೆಲಸಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಎಂದು ಕೊಡಲಾಯಿತು ಮತ್ತು ಎಷ್ಟು ಮೊತ್ತಕ್ಕೆ ಕೊಡಲಾಯಿತು? ಹಾಗೂ ಈ ಕೆಲಸವನ್ನು ಎಷ್ಟು ದಿನಗಳೊಳಗಾಗಿ ಮುಗಿಸಬೇಕೆಂದು ನಿರ್ಧರಿಸಲಾಗಿತ್ತು?

ಇ. ಈ ಸ್ಥಗಿತಗೊಂಡ ಕೆಲಸವನ್ನು ಎಷ್ಟು ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು?

ಈ. ಈ ಕೆಲಸವನ್ನು ಕಳೆದ ವರ್ಷವೇ ಪೂರ್ಣಗೊಳಿಸಲಾಗುವುದೆಂದು ತಿಳಿಸಿದ್ದರೂ ಕೂಡಾ ಇದುವರೆಗೂ ಕೆಲಸ ಪ್ರಾರಂಭಿಸದೇ ಇರುವ ಸಂಗತಿ ನಿಜವೇ? ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಉ. ಇಲ್ಲಿ ಬ್ರೀಜ್ ಕಂ ಬಾಂದಾರ ನಿರ್ಮಿಸುವುದರಿಂದ ನೀರು ಸಂಗ್ರಹವಾಗಿ ಕೊಳವೆ ಬಾವಿಗಳ ಸಾಮರ್ಥ್ಯ ಹೆಚ್ಚಾಗಿ, ಮಾಟೊಳ್ಳಿ ಮಲ್ಲೂರ, ಕಾರಿಮನಿ, ಹೊಸೂರು ಮುಂತಾದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೋಗುವುದರಿಂದ ಕೂಡಲೇ ಈ ಕೆಲಸ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದೇ?

ಉತ್ತರ

ಅ. ಹೌದು.

ಆ. ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಗೆ ಬೆಳಗಾಂ ಜಿಲ್ಲಾ ಪಂಚಾಯತ್‌ನಿಂದ 25.3.89ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ರೂ.9.765 ಲಕ್ಷಕ್ಕೆ ನೀಡಲಾಗಿದೆ. 2001-02ನೇ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಭರವಸೆ ನೀಡಿದ್ದರೂ ಸಹ ಹಣದ ಕೊರತೆಯಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ.

ಇ. ಸದರಿ ಕಾಮಗಾರಿಯನ್ನು 2002-2003ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಈ. ಹೌದು.

ಹಣದ ಕೊರತೆಯಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಆದಾಗ್ಯೂ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 2002-03ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗುವುದು.

ಉ. ಹೌದು.

ಈ ಸದರಿ ಕಾಮಗಾರಿಯನ್ನು 2002-03ನೇ ಸಾಲಿನಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿನ ಆಯುರ್ವೇದಿಕ್ ಹಾಗೂ ಹೋಮಿಯೋಪಥಿಕ್ ಆಸ್ಪತ್ರೆಗಳ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1134(1093)

ಸದಸ್ಯರ ಹೆಸರು: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು: ಡಾ॥ ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಆಯುರ್ವೇದಿಕ್ ಹಾಗೂ ಹೋಮಿಯೋಪಥಿಕ್ ಆಸ್ಪತ್ರೆಗಳನ್ನು ತೆರೆಯಬೇಕೆಂದು ನಿರ್ಧರಿಸಲಾಗಿದೆ?

ಆ) ಆಯುರ್ವೇದಿಕ್ ಆಸ್ಪತ್ರೆಗಳನ್ನು ತೆರೆಯುವ ಕಾಲಕ್ಕೆ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಗೋವನಕೊಪ್ಪ ಹಾಗೂ ಪಟ್ಟಿಹಾಳ ಕೆ.ಜಿ. ಗ್ರಾಮಗಳಲ್ಲಿ ಆಯುರ್ವೇದಿಕ್ ಆಸ್ಪತ್ರೆಗಳನ್ನು ತೆರೆಯಲು ಪರಿಶೀಲಿಸಲಾಗುವುದೇ?

ಇ) ರಾಜ್ಯದಲ್ಲಿ ಹೋಮಿಯೋಪಥಿಕ್ ಆಸ್ಪತ್ರೆಗಳನ್ನು ತೆರೆಯುವ ಕಾಲಕ್ಕೆ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಾಟೊಳ್ಳಿ ಹಾಗೂ ಇಂಗಳಗಿ ಗ್ರಾಮಗಳಲ್ಲಿ ಹೋಮಿಯೋಪಥಿಕ್ ಆಸ್ಪತ್ರೆಗಳನ್ನು ತೆರೆಯಲು ಪರಿಶೀಲಿಸಲಾಗುವುದೇ?

ಉತ್ತರ

ಅ) ಈ ಸಾಲಿನಲ್ಲಿ ಹೊಸದಾಗಿ ಆಯುರ್ವೇದ ಆಸ್ಪತ್ರೆಯನ್ನು ಮಂಗಳೂರಿನಲ್ಲಿ ತೆರೆಯಲಾಗಿದೆ.

ಆ) ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು.

ಇ) ಮೇಲಿನ ಪ್ರಶ್ನೆ(ಆ) ಉತ್ತರದನ್ವಯ ಉದ್ಭವಿಸುವುದಿಲ್ಲ.